# ಅದು ಏನೋ ಇತ್ತು

ತಮ್ಮ ಮೂಲದ ಕುರಿತು ಚಿಂತಿಸುವುದೂ, ಅದನ್ನು ಹುಡುಕುವುದೂ, ಮೂಲವನ್ನು ಅದು ಹೇಗೋ ನಾವು ಕಳೆದುಕೊಂಡಿರುವೆವೆಂದು ಭಾವಿಸಿ ತಲ್ಲಣಗೊಳ್ಳುವುದೂ ಮನುಷ್ಯಬುದ್ಧಿಗೆ ಸಹಜವಾದದ್ದು. ತಾಯನ್ನು ನೆನೆಯುವುದು ಮಗುವಿಗೆ ಹೇಗೆ ಸಹಜವೋ ಹಾಗೆ. ಎಲ್ಲ ಬಗೆಯ ಹುಡಕಾಟಗಳೂ ಸಾಮಾಜಿಕವಾದ, ಆಧ್ಯಾತ್ಮಿಕವಾದ ಹುಡುಕಾಟಗಳೂ ಕೂಡ ತಾತ್ವಿಕವಾಗಿ ನೋಡಿದರೆ ಒಂದಲ್ಲ ಒಂದು ಬಗೆಯಲ್ಲಿ ಮೂಲದ ಹುಟುಕಾಟವೇ ಆಗಿ ಕಂಡು ಬರುತ್ತದೆ. ಯಾವ ಒಂದನ್ನು ತಿಳಿದರೆ ಉಳಿದೆಲ್ಲವನ್ನೂ ತಿಳಿದಂತೆ ಆಗುವುದೋ ಅದನ್ನು ಬಲ್ಲೆಯಾ? ಅದಾವುದು? ಎಂದು ಉಪನಿಷತ್ತು ಕೇಳುತ್ತದೆ. ಹೀಗೆ ಕೇಳುವಲ್ಲಿ ಎಲ್ಲದರ ಮೂಲವೂ ಒಂದೇ ಏಕಮೂಲದಿಂದ ಯಾವುದೋ ತಾಯಿಬೇರಿನಿಂದ ಇವೆಲ್ಲ ಉಂಟಾದವು ಮತ್ತು ಈ ಎಲ್ಲದರ ಜತೆ ತಾಯಿಬೇರಿಗೆ ತಾಯಿ–ಮಕ್ಕಳ ಸಂಬಂಧವಿದೆ ಎಂದು ಉಪನಿಷತ್ತು ಸೂಚಿಸುತ್ತದೆ. ಉಪನಿಷತ್ತಿನ ಈ ಮಾತಿಗೆ ಸಂವಾದಿಯಾದ ಮಾತೊಂದು ಜೈನವಾಙ್ಮಯದಲ್ಲೂ ಇದೆ. ಆ ಮಾತು ಹೀಗಿದೆ: 'ಏಕೋಭಾವ: ಸರ್ವಥಾಯೇನದೃಷ್ಟ: ಸರ್ವೇಭಾವಾ: ಸರ್ವಥಾತೇನದೃಷ್ಟಾ:! ಸರ್ವೇಭಾವಾ: ಸರ್ವಾಥಾ ಯೇನ ದೃಷ್ಟಾ: ಏಕೋಭಾವ: ಸರ್ವಥಾ ತೇನ ದೃಷ್ಟ:! 'ಅಂದರೆ ಒಂದು ಭಾವವನ್ನು ಚೆನ್ನಾಗಿ, ಕೂಲಂಕುಷವಾಗಿ, ಆದ್ಯಂತವಾಗಿ (ಸರ್ವಥಾ) ತಳಮಟ್ಟದಲ್ಲಿ ಅನುಭವಿಸಿದವನು ಉಳಿದೆಲ್ಲ ಭಾವವನ್ನೂ ಗಾಢವಾಗಿ ಅನುಭವಿಸಿದಂತೆಯೇ ಆಗುತ್ತದೆ. ಮತ್ತು ಎಲ್ಲ ಭಾವಗಳನ್ನೂ ಗಾಢವಾಗಿ ಅನುಭವಿಸಿದವನು ಆ ಎಲ್ಲ ಭಾವಗಳನ್ನೂ ಒಂದು ಭಾವವಾಗಿಯೇ ಅನುಭವಿಸಿದಂತೆ ಸಂಭವಿಸಿ ಬಿಡುವುದು– ಎಂದು ಅರ್ಥ. ಒಂದು ಎಲ್ಲದರ ಜತೆ ಸಂಬಂಧ ಹೊಂದಿದೆಯಾಗಿ ಎಲ್ಲವೂ ಎಲ್ಲದರ ಜತೆ ಸಂಬಂಧ ಹೊಂದಿದೆ ಮತ್ತು ಯಾವ ಒಂದೂ ಸ್ವತಂತ್ರವಲ್ಲವೆಂಬಂತೆ ಇದ್ದು ಯಾವುದೊಂದನ್ನು ಅರಿತಾಗ ಅದು ತಾನು ಸಂಬಂಧ ಹೊಂದಿದ ಇನ್ನೊಂದರತ್ತ ಬೆರಳು ತೋರಿಸಿಯೇ ತೋರಿಸುತ್ತದೆ!

ಒಂದರ ಮೇಲೆ ಒತ್ತು ಕೊಟ್ಟಾಗ ಅದು 'ಏಕಾಂತವಾದ' ಎನಿಸುತ್ತದೆ. ಅನೇಕದ ಮೇಲೆ ಒತ್ತು ಕೊಟ್ಟಾಗ ಅದು 'ಅನೇಕಾಂತವಾದ' ಎನಿಸುತ್ತದೆ. ಯಾವುದರ ಮೇಲೆ ಒತ್ತು ಕೊಡುತ್ತೇವೆ ಎನ್ನುವುದು ಅವರವರಿಗೆ ಮುಖ್ಯವಾದದ್ದೇ ಆದರೂ ಎಲ್ಲವೂ ಪರಸ್ಪರ ಸಂಬಂಧಿತವೆಂದು ವೈದಿಕರೂ (ಉಪನಿಷತ್ತು) ಅವೈದಿಕರೂ (ಜೈನ) ಈರ್ವರೂ ಚೆನ್ನಾಗಿ ಬಲ್ಲರು. ಯಾವ ಫಲಿತಾಂಶಗಳನ್ನು ನಾವು ಎತ್ತಿ ಹಿಡಿಯುತ್ತೇವೆ ಎನ್ನುವುದು ಬೇರೆ ಮಾತು– ಆದರೆ ಹುಡುಗಾಟ ಅನಿವಾರ್ಯ. ಮತ್ತು ಆ ಹುಡುಕಾಟವು ತನ್ನ ಮೂಲದ ಬಗೆಗಿನ ಹುಡುಕಾಟದ ಜತೆಗೆ ಸಂಬಂಧಿತವಾಗಿಯೇ ಇರುವುದು.

ನಮ್ಮ ಬದುಕಿನಲ್ಲಿಯೇ ಈ ಎಲ್ಲ ಸಂಗತಿ– ವಿಸಂಗತಿಗಳನ್ನು ನೋಡಿದರೆ, ಹೀಗೇಕೆ ಆಗುತ್ತಿದೆ? ಏಕಾಗಬಾರದು? ಯಾವ ಅನುಭವದ ಒತ್ತಡದಿಂದಾಗಿ ನಾವು ಹುಡುಕಾಡುವೆವು? ಅಂದರೆ ಮೂಲ ಅನುಭವವೊಂದು ಈಗಲೂ ನಮ್ಮಲ್ಲಿ ನೆನಪಾಗಿ ಉಳಿದಿದೆಯೆ? ಅದು ನಮ್ಮ ಮನದಾಳದ ಸ್ಮೃತಿ–ಅಸ್ಮೃತಿ–ವಿಸ್ಮೃತಿಗಳ ನಡುವಣ ಸುಪ್ತಕಂದರದಲ್ಲಿ ಹುದುಗಿದೆಯೆ? ಹುದುಗಿದ್ದರೆ ಅದರ ನೆನಪು ಮತ್ತೆ ಜಾಗ್ರತವಾಗುವ ಸಾಧ್ಯತೆ ಇದೆಯೆ? ಜಾಗ್ರತವಾದರೆ ಅದನ್ನೇ 'ಜ್ಞಾನೋದಯ'ವೆಂದು ಬಲ್ಲವರು ಕರೆಯುವುದೆ? ಅಂದರೆ ಜ್ಞಾನವು ಹೊಸದಾಗಿ ಉಂಟಾಗುವುದಲ್ಲ, ಅದು ಉದಯವಾಗುವುದು, ಅಸ್ತವಾದಂತೆ ಇದ್ದದ್ದು ಮರಳಿ ಉದಯವಾಗುವುದು, ಹೀಗೇನು? ಇದನ್ನು ಒಪ್ಪಿದರೆ ಆ ಅಸ್ತವಾದಂತೆ ಇರುವ ಮೂಲ ಅನುಭವ ಯಾವುದು?

ಬೌದ್ಧ ತತ್ವಜ್ಞಾನಿಗಳು ಈ ಸಮಸ್ಯೆಯನ್ನು ಹೀಗೆ ಬಿಡಿಸುವರು. ಅವರು ಪ್ರತ್ಯಕ್ಷಾನುಭವವನ್ನು ಬಹುಸೂಕ್ಷ್ಮವಾಗಿ ಗಮನಿಸುವರು. ನಮ್ಮ ಕಣ್ಣು ವಸ್ತುವೊಂದನ್ನು ನೋಡುವುದು. ಇದನ್ನು 'ಇಂದ್ರಿಯ ಸನ್ನಿಕರ್ಷ' ಎನ್ನುವರು. ನೋಡಿದ ಕ್ಷಣದಲ್ಲಿ– ಕ್ಷಣ ಮಾತ್ರದಲ್ಲಿ– ಕಣ್ಣು ಆ ವಸ್ತುವನ್ನು ಹೇಗೆ ಗ್ರಹಿಸುವುದು? ಅದು 'ಏನೋ ಒಂದು' ಎಂಬುದಾಗಿ ಮಾತ್ರ ಗ್ರಹಿಸುವುದು. ಇದನ್ನು ನಿರ್ವಿಕಲ್ಪಪ್ರತ್ಯಕ್ಷವೆನ್ನುವರು. ಅಂದರೆ ಕಣ್ಣು, ತಾನು ನೋಡಿದ ವಸ್ತುವಿನ ಹೆಸರು, ಆ ಹೆಸರಿನ ಜತೆಗೆ ಒಡಗೂಡಿದ ಅನೇಕ ಮಾಹಿತಿಗಳು ಇವೆಲ್ಲವನ್ನೂ ನೋಡಿದ ಕ್ಷಣದಲ್ಲಿ ಗ್ರಹಿಸುವುದೇ ಇಲ್ಲ. ಇದು ನಿಜವಾದ ಗ್ರಾಹ್ಯಾರ್ಥ. ನೋಡಿದ ಈ ಕ್ಷಣದಿಂದ ಮಿಂಚಿನಂಥ ಉತ್ತರಾರ್ಧದಲ್ಲಿಯೇ ವಸ್ತುವಿನ ಹೆಸರು ನೆನಪಾಗುವುದು. ನೆನಪಿನ ಜತೆಗೆ ಎಲ್ಲ ಮಾಹಿತಿಗಳೂ. ಅಲ್ಲಿಗೆ ಆ ಏನೋ ಒಂದನ್ನು ನೋಡಿದ ಅನುಭವವೇ ಅಸ್ತಂಗತವಾಗಿ, ನಾವು ಈ ಲೋಕದಲ್ಲಿ ಕಲಿತ ಮಾಹಿತಿಗಳೆಲ್ಲವೂ ಮುನ್ನೆಲೆಗೆ ಬಂದು ನಾವು ನೋಡಿದ್ದು ಇಂಥದನ್ನು ಎಂದು ನಿರ್ದಿಷ್ಟಪಡಿಸುವೆವು. ಅಂದರೆ ನಿರ್ವಿಕಲ್ಪಪ್ರತ್ಯಕ್ಷಾನುಭವವು, ಸವಿಕಲ್ಪ ಅನುಭವವಾಗಿ, ನಮ್ಮ ಕಲ್ಪನೆಗಳಿಂದ ಕೂಡಿದ್ದಾಗಿ, ಕ್ಷಣ ಮಾತ್ರದಲ್ಲಿ ಮಾರ್ಪಡುವುದು! ಅಂದರೆ ನಾವು ಈ ಲೋಕದಲ್ಲಿ ಕಲಿತುದನ್ನೇ ನಮಗೆ ಕಲಿಸಿಕೊಟ್ಟುದನ್ನೇ– ನಾವು ಮರಳಿ ನೋಡಿದಂತಾಯಿತು. ವಸ್ತುವು ಹೇಗಿದೆಯೋ ಹಾಗೆ ನಾವದನ್ನು ನೋಡಿಯೂ ನಮಗದು ದಕ್ಕಲಿಲ್ಲ! ಹೇಗಿದೆಯೋ ಹಾಗೆ ನಾವದನ್ನು ನೋಡಲಾಗುತ್ತಿದ್ದರೆ, ನಾವು ನಮ್ಮಲ್ಲಿ ನಿಜಕ್ಕೂ ಹೇಗೆ ಇದ್ದೇವೆ ಎನ್ನುವುದು– ನಾವಿರುವಂತೆಯೇ ನಮಗೆ ಅನುಭವವಾಗುತ್ತಿತ್ತು! ನಮ್ಮ ಕಲ್ಪಿತ ವ್ಯಕ್ತಿತ್ವವು ನಷ್ಟವಾಗಿ ನಮ್ಮ ನೈಜ ವ್ಯಕ್ತತ್ವದ ಅನುಭವವೇ ನಮಗಾಗುತ್ತಿತ್ತು! ಕಲ್ಪನೆಯನ್ನು ನೋಡಿದ ವ್ಯಕ್ತಿಯೂ ಕಲ್ಪನೆಯೇ ಆಗಿರುವನು! ಎಲ್ಲ ಕಲ್ಪನೆಗಳನ್ನು ಮೀರಿದ ಮೂಲವನ್ನು ತಿಳಿಯಬೇಕೆನ್ನುವ ತುಡಿತದಲ್ಲಿ ಬೌದ್ಧರು– ಸವಿಕಲ್ಪ ಪ್ರತ್ಯಕ್ಷವು ಪ್ರಮಾಣವೇ ಅಲ್ಲ, ನಿರ್ವಿಕಲ್ಪ ಪ್ರತ್ಯಕ್ಷವು ಮಾತ್ರ ಪ್ರಮಾಣ ಎನ್ನುವರು. ಅದಿರಲಿ.

ಶಬ್ದವು ಕಲ್ಪಿತವಾದ ಅರ್ಥದೊಡನೆ ಒಂದಾಗಿ ಅನೇಕ ಕಲ್ಪನೆಗಳನ್ನು ತಾನು ಹೊತ್ತುಕೊಂಡು ಲೋಕ ವ್ಯವಹಾರವನ್ನು ಮಾಡುತ್ತಿದೆ. ಎಲ್ಲ ಕಲ್ಪನೆಗಳನ್ನೂ ಬಿಟ್ಟುಕೊಟ್ಟು ತನ್ನನ್ನೇ ತಾನು ನೋಡಬೇಕೆನ್ನುವ ಇಚ್ಛೆಯು ಶಬ್ದಕ್ಕೆ ಉಂಟಾದರೆ ಆ ಅನುಭವ ಹೇಗೆ ಇದ್ದೀತು? ಬೇಂದ್ರೆಯವರ ಒಂದು ಕವಿತೆ ಈ ದಿಕ್ಕಿನಲ್ಲಿ ನಡೆಯುತ್ತಿದೆ. ಕವಿತೆಯ ಹೆಸರು 'ನೋss,,,' ಎಂದು. ಕವಿತೆ ಹೀಗೆ ಶುರುವಾಗುತ್ತದೆ.

'ಅದು ಏನೋ ಇತ್ತು, ನೋ ನೋ ನೋ ಎನುತಿತ್ತು, ಎನುತಲೆ ಇತ್ತು.
ತಲೆ ಇತ್ತು, ಅತ್ತಲೆ ಇತ್ತು, ಬತ್ತಲೆ ಬಾಲಕನಂತಿತ್ತು, ಅಳುತಿತ್ತು, ನಗುತಿತ್ತು.
ತಾ ತಾ ತಾಯೀ ಎನಿತಿತ್ತು, ತಾನೋ? ನಾನೋ? ನೀನೋ? ಏನೇನೋ?'.....

'ನೋ' ಎಂದರೆ ನಕಾರ. ನಿಷೇಧಾತ್ಮಕ. ಯಾವ ಕಲ್ಪನೆಗಳೂ ತನಗೆ ಒಪ್ಪುವುದಿಲ್ಲವೆಂದು. ಕಲ್ಪನೆಗಳನ್ನು ಒಪ್ಪದಿರುವುದೇ ತನ್ನ ಸ್ವಭಾವ– ತನ್ನ ಸ್ವರೂಪವೆಂದು. ಕಲ್ಪಿಸುವುದೇ ಸ್ವಭಾವವಾಗಿರುವ ಅರ್ಥಪ್ರಪಂಚದಲ್ಲಿ ತಾನು ನೋಯುತ್ತಲಿದ್ದೇನೆ ಎಂದೂ ಅರ್ಥ. 'ನೋs' ಎನ್ನುವ ದೀರ್ಘಕ್ಕೆ ನೋವೆಂದೂ ಅರ್ಥ. ನೋಂಪಿ ಎಂದೂ ಅರ್ಥ. ನೋಂಪಿ ಎಂದರೆ ವ್ರತ. ಕಲ್ಪನೆಗಳನ್ನು ನಿರಾಕರಿಸುವ 'ನಿಜ'ಕ್ಕೆ ನೋಯುವುದೇ ವ್ರತವಾದಂತಿದೆ!

ಆ ನೋವು ಹೇಗಿದೆ ಎಂದರೆ ಬತ್ತಲೆ ಬಾಲಕ ಅತ್ತಂತೆ! ನಕ್ಕಂತೆ!.....

ಶಬ್ದಾರ್ಥಗಳ ಸವಿಕಲ್ಪ ಪ್ರಪಂಚದಲ್ಲಿ ಮಹಾವಿಹಾರಿಯಾದ ಬೇಂದ್ರೆಯವರಿಗೆ ನಿರ್ವಿಕಲ್ಪ ಅನುಭವವನ್ನು ಕಂಡು ಕೊಳ್ಳುವ ಗುಂಗು! ಅದು ಈ ಕವನದಲ್ಲಿ ಕಾಣಿಸಿಕೊಂಡಿದೆ.; ಕಲ್ಪನೆಗಳ ಭಾರದಿಂದ ಕಳಚಿಕೊಳ್ಳಬೇಕೆನ್ನುವ ಶಬ್ದದ ನೋವು ಕವಿಗಲ್ಲದೆ ಮತ್ತಾರಿಗೆ ಕೇಳಿಸುತ್ತದೆ?

■ ತೋಷ

## ಮಾತೇ ಮುತ್ತು

★ ಮದುವೆಯ ವೈಫಲ್ಯಕ್ಕೆ ಪ್ರೀತಿಯ ಕೊರತೆ ಕಾರಣವಲ್ಲ; ಸ್ನೇಹದ ಕೊರತೆ ಕಾರಣ.

–ಫ್ರೆಡ್ರಿಕ್ ನೀಷೆ

★ ಸಣ್ಣ ಪುಟ್ಟ ಸಂಗತಿಗಳ ಬಗ್ಗೆಯೂ ಶ್ರದ್ಧೆ ಇರಲಿ. ಅದರಲ್ಲೇ ನಿಮ್ಮ ಶಕ್ತಿ ಅಡಗಿದೆ.

–ಮದರ್ ತೆರೇಸಾ

★ ಮಾತಿನಲ್ಲಿ ದಯೆ ಆತ್ಮವಿಶ್ವಾಸ ಹುಟ್ಟಿಸುತ್ತದೆ. ಮನಸ್ಸಿನಲ್ಲಿ ದಯೆ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಕೊಡುವುದರಲ್ಲಿ ದಯೆ ಇದ್ದರೆ ಪ್ರೀತಿ ಹುಟ್ಟುತ್ತದೆ.

–ಲಾವೊ ತ್ಸು

★ ಸಾವು ಎನ್ನುವುದು ಮನುಷ್ಯನಿಗೆ ಘಟಿಸುವ ಅತ್ಯಂತ ಕೆಟ್ಟ ಘಟನೆಯೇನೂ ಅಲ್ಲ.

–ಪ್ಲೇಟೋ

★ ದಾರಿ ಇದ್ದಲ್ಲಿ ನಡೆಯಬೇಡಿ. ದಾರಿ ಇಲ್ಲದಲ್ಲಿ ನಡೆದು ದಾರಿ ತೋರಿಸಿ.

–ರಾಲ್ಫ್ ಎಮರ್ಸನ್